





ಕ್ರೀಡೆಗಳು. ಕುದುರೆ ಸವಾರಿ ಇಲ್ಲಿನ ಪ್ರಾಚೀನ ಮನರಂಜನಾ ಚಟುವಟಿಕೆ. ಅದಕ್ಕಾಗಿ ಉತ್ತಮ ಸವಾರಿ ಮಾರ್ಗ ಇಲ್ಲಿ ನಿರ್ಮಾಣಗೊಂಡಿದೆ .

ಪ್ರಕೃತಿಯ ಸೌಂದರ್ಯವನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯಲು ಇದು ಉತ್ತಮ ತಾಣ. ಹಿಮಾಚಲದ ವೇಷಗಳಲ್ಲಿ ವಿವಿಧ ಭಂಗಿಯ ದೃಶ್ಯಗಳನ್ನು ಸೆರೆಹಿಡಿದು ಕೇವಲ ಇಪ್ಪತ್ತು ರೂಪಾಯಿಗಳಿಗೆ ನೀಡುವ ಛಾಯಾಗ್ರಾಹಕರು ಇಲ್ಲಿ ಸಿಗುತ್ತಾರೆ. ಸ್ವಂತ ಕ್ಯಾಮರಾ ಇಲ್ಲದವರಿಗೆ ತಮ್ಮ ಕ್ಯಾಮರಾಗಳಲ್ಲಿ ಸೆರೆ ಹಿಡಿದು ಮನೆ ವಿಳಾಸಕ್ಕೆ ತಲುಪಿಸುವ ವ್ಯವಸ್ಥಾಪಕರು ಇಲ್ಲಿದ್ದಾರೆ.

ಮೊಲದೊಡನೆ ಮುದ್ದಿನಾಟ: ಹೂವಿನಿಂದ ಅಲಂಕರಿಸಿದ ಬುಟ್ಟಿಯಲ್ಲಿ ಇಟ್ಟ ಮೊಲದ ಮರಿಗಳ ಜೊತೆ ಆಟವಾಡುವುದಕ್ಕೆ ಇಲ್ಲಿ ಅವಕಾಶವಿದೆ. ಹತ್ತು ನಿಮಿಷಕ್ಕೆ 50 ರೂಪಾಯಿ ಬಾಡಿಗೆ!

ಖಜ್ಜಿಯಾರ್ ಸಮೀಪದಲ್ಲಿ ಕಣ್ತುಂಬಿಸಿಕೊಳ್ಳಲು ಮತ್ತಷ್ಟು ಚೇತೋಹಾರಿ ತಾಣಗಳಿವೆ. ಡಾಲ್ ಹೌಸಿಯ ಚರ್ಚ್ ಮಾಲ್ ರೋಡ್, ಪಂಚ್ ಫುಲ್ ವಾಟರ್ ಫಾಲ್ಸ್, ದಾಲ್ ಕುಂಡ್ ಟ್ರೆಕ್, ಕಾಲಾಟಾಪ್ ವನ್ಯಧಾಮ, ಚಾಮರ ಲೇಕ್ ಡ್ಯಾಮ್, ಲಕ್ಷ್ಮೀನಾರಾಯಣ ಟೆಂಪಲ್, ರಾವಿ ನದಿ, ಫಿರ್ ಪಂಜಾರಿ ಪರ್ವತ ಶ್ರೇಣಿ ಇತ್ಯಾದಿ.

ಹೋಗುವುದು ಹೇಗೆ?: ನವದೆಹಲಿಯಿಂದ ಖಜ್ಜಿಯಾರ್ ಸಮೀಪದ ಪಠಾಣ್ ಕೋಟ್‌ಗೆ ರೈಲು ವ್ಯವಸ್ಥೆ ಇದೆ. ಅಲ್ಲಿಂದ ಡಾಲ್ ಹೌಸಿ ನಾಲ್ಕು ಗಂಟೆಯ ಕಾರು ಪ್ರಯಾಣ. ಇಲ್ಲಿಗೆ ಸಾಕಷ್ಟು ಸಂಖ್ಯೆಯಲ್ಲಿ ಹವಾ ನಿಯಂತ್ರಿತ ಬಸ್ ಗಳ ಸೌಕರ್ಯವಿದೆ. ತಂಗಲು ಅನೇಕ ಗೆಸ್ಟ್ ಹೌಸ್‌ಗಳಿವೆ.